# **ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.3642/2014/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:13.7.2017.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:– ನೆಲಮಂಗಲ ಪುರಸಭೆಯ ಖಾತೆ ನಂ.7557ರ ಏಕ ನಿವೇಶನ ಖಾತೆಯನ್ನು ಷರತ್ತು ಉಲ್ಲಂಘಿಸಿ ಖಾತೆ ಸಂ.7557/1ರಿಂದ 20 ನಿವೇಶನಗಳನ್ನು ವಿಂಗಡಿಸಿರುವುದರಿಂದ ಈ ಬಹು ಖಾತೆಗಳನ್ನು ರದ್ದುಗೊಳಿಸಿ ಮಾನ್ಯ ಜಿಲ್ಲಾಧಿಕಾರಗಳ ಭೂ ಪರಿವರ್ತನಾ ಆದೇಶದ ಪ್ರಕಾರ ಏಕಖಾತೆ ನಿವೇಶನ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ** ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಎನ್.ಎಂ.ವೆಂಕಟೇಶ್, ಅಡೇಪೇಟೆಯ ನಿವಾಸಿ, ನೆಲಮಂಗಲ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ **ರಾಮದಾಸೇಗೌಡ**. ಬಿ.ಜಿ, (2) ಶ್ರೀ **ಶಿವಕುಮಾರ್.ಡಿ**, (3)ಶ್ರೀ **ಬಸವಾರಾಧ್ಯ.ಎಂ. ಉಪನೋಂದಣಾಧಿಕಾರಿಗಳು, ನೆಲಮಂಗಲ ಉಪನೋಂದಣಾಧಿಕಾರಿಗಳ ಕಛೇರಿ**, (4) ಶ್ರೀ **ಮಂಜುನಾಥ್, ಮುಖ್ಯಾಧಿಕಾರಿಗಳು, ಪುರಸಭೆ, ನೆಲಮಂಗಲ, ಮತ್ತು** (5) ಶ್ರೀ **ಶ್ರೀನಿವಾಸ, ಅಂದಿನ ಮುಖ್ಯಾಧಿಕಾರಿಗಳು, ಹಾಲಿ ನಿವೃತ್ತ, ಪುರಸಭೆ, ನೆಲಮಂಗಲ**,(ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ಪುರಸಭೆ ವ್ಯಾಪ್ತಿಯ ಸರ್ವೆ ನಂ.28/3 ವಿಸ್ತೀರ್ಣ 30 ಗುಂಟೆ ವ್ಯವಸಾಯದ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ದಿ.9.10.2009ರಂದು

ಮಾನ್ಯ ಜಿಲ್ಲಾಧಿಕಾರಿಗಳು ಭೂಪರಿವರ್ತನೆ ಆದೇಶ ಮಾಡಿರುತ್ತಾರೆ. ದಿ.31.3.2010ರಂದು ಏಕ ನಿವೇಶನ ವಸತಿ ಉದ್ದೇಶದ ನಕ್ಷೆಯನ್ನು ಹಲವು ನಿಬಂಧನೆಗಳೊಡನೆ ಪ್ರಾರಂಭಿಕ ಪ್ರಮಾಣಪತ್ರವನ್ನು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ನೀಡಿರುತ್ತಾರೆ. ಆದರೆ ಈ ನಿಬಂಧನೆಗಳನ್ನು ಉಲ್ಲಂಘಿಸಿ 5ನೇ ಎದುರುದಾರರು ಏಕ ಖಾತೆಯನ್ನು ವಿಭಜಿಸಿ ಬಹುಖಾತೆ ಸಂ.7557/1ರಿಂದ 20 ನಿವೇಶನಗಳ ಉಪಖಾತೆಗಳನ್ನು ಪುರಸಭೆಯಲ್ಲಿ ಅಂಗೀಕರಿಸಿ ಖಾತೆ ಮಾಡಿರುತ್ತಾರೆ. 1ರಿಂದ 3ನೇ ಎದುರುದಾರರು ಇಂತಹ ಖಾತೆಗಳ ಆಧಾರದ ಮೇಲೆ ಕ್ರಯಪತ್ರಗಳನ್ನು ನೋಂದಣಿ ಮಾಡಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕ್ಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನೋಂದಾಯಿತ ದಸ್ತಾವೇಜುಗಳು ಕ್ರಯಪತ್ರಗಳಾಗಿದ್ದು, ಅದರಲ್ಲಿ ಉಭಯಪಕ್ಷಕಾರರು ಹಾಜರಾಗಿ ಸರ್ಕಾರದ ಸುತ್ತೋಲೆ ಸಂ.ಕಂಇ 344 ಮುನೋಮು 2008 ದಿ.6.4.2009ರ ಸುತ್ತೋಲೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ನೋಂದಣಿ ಕಾಯ್ದೆ 1908 ಕಲಂ.34, 35ನ್ನು ಅನುಸರಿಸಿ ದಸ್ತಾವೇಜುಗಳನ್ನು ನೋಂದಾಯಿಸಲಾಗಿದೆ. ಇದರಲ್ಲಿ ಯಾವುದೇ ಅಕ್ರಮ ನಡೆದಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಇವರು ದಿ.30.8.2013ರಂದು ಪುರಸಭೆಯ ಮುಖ್ಯಾಧಿಕಾರಿಯಾಗಿ ಹುದ್ದೆ ವಹಿಸಿಕೊಂಡಿದ್ದು, ಈ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಲಾಗಿ, ಖಾತೆ ನಂ.7557ರ ಖಾತೆಯನ್ನು ವಿಭಜನೆ ಮಾಡಿ ಖಾತೆ ಮಾಡಲಾಗಿದ್ದು, ಆ ಆಧಾರದ ಮೇಲೆ ಕ್ರಯಪತ್ರ ನೊಂದಣಿಯಾಗಿದ್ದು ಕಂಡುಬರುತ್ತದೆ. ತಾವು ಯಾವುದೇ ಷರತ್ತನ್ನು ಉಲ್ಲಂಘಿಸಿ ಖಾತೆ ವಿಭಜನೆ ಮಾಡಿರುವುದಿಲ್ಲ. ಈ ರೀತಿ ಏಕ ನಿವೇಶನವನ್ನು ಬಹುನಿವೇಶನಖಾತೆ ಮಾಡಿದಾಗ 5ನೇ ಎದುರುದಾರರು ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲಾತಿಗಳಿಂದ ಕಂಡುಬರುತ್ತದೆ. ಆದ್ದರಿಂದ ಸದರಿ ಪ್ರಕರಣದಿಂದ ತನ್ನನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

5. 4ನೇ ಎದುರುದಾರರ ಆಕ್ಷೇಪಣೆಯಲ್ಲಿನ ಅಂಶಗಳ ಮೇರೆಗೆ 5ನೇ ಎದುರುದಾರರನ್ನು ಪ್ರಕರಣದಲ್ಲಿ ಸೇರ್ಪಡಿಸಿ, ಆಕ್ಷೇಪಣೆಯನ್ನು ಕೇಳಲಾಗಿ, ಆದರೆ ಅವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಸ್ವೀಕೃತಿ ಬಂದಿರುತ್ತದೆ. ಇವರು ದಿ.30.4.2012ರಂದು ನಿವೃತ್ತಿ ಹೊಂದಿರುತ್ತಾರೆಂದು ತಿಳಿದುಬಂದಿರುತ್ತದೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

7. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ನೆಲಮಂಗಲ ಪುರಸಭೆ ವ್ಯಾಪ್ತಿಯಲ್ಲಿಯ ಖಾತೆ ನಂ.7557 ಭೂ ಪರಿವರ್ತನೆಯಾಗಿ ಏಕ ಖಾತೆ ಮಾಡಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಈ ಖಾತೆಗಳ ಆಧಾರದ ಮೇಲೆ 1ರಿಂದ 3ನೇ ಎದುರುದಾರರು ಕ್ರಯಪತ್ರಗಳನ್ನು ನೋಂದಣಿ ಮಾಡಿರುತ್ತಾರೆ. 5ನೇ ಎದುರುದಾರರು ಏಕ ನಿವೇಶನವುಳ್ಳ ಖಾತೆಯನ್ನು ಬಹು ನಿವೇಶನವಾಗಿ ದಾಖಲಿಸಿದ ಬಗ್ಗೆ ಪುರಸಭೆಯಲ್ಲಿ ಕಡತ ಲಭ್ಯವಿರುತ್ತದೆಂದು 4ನೇ ಎದುರುದಾರರು ತಿಳಿಸಿರುತ್ತಾರೆ. ಈ ರೀತಿ ಬಹುನಿವೇಶನ ಖಾತೆ ತೆರೆದಿರುವುದು ಮಾನ್ಯ ಜಿಲ್ಲಾಧಿಕಾರಿಗಳ ಭೂ ಪರಿವರ್ತನಾ ನಿಯಮದ ಷರತ್ತುಗಳನ್ನು ಉಲ್ಲಂಘಿಸಿದೆಯೆಂದು ಕಂಡುಬರುತ್ತದೆ.

8. 4ನೇ ಎದುರುದಾರರು ಇತ್ತೀಚೆಗೆ ಈ ಬಹು ನಿವೇಶನ ವಿಂಗಡಿಸಲು ಅನುಮತಿ ಕೋರಿ ಕೆಲವು ವ್ಯಕ್ತಿಗಳ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಲ್ಲಿಸಿದ್ದು, ಅವುಗಳು ಚಾಲ್ತಿಯಲ್ಲಿರುತ್ತವೆಂದು ತಿಳಿಸಿರುತ್ತಾರೆ. ಈ ಏಕ ನಿವೇಶನಗಳನ್ನು ಬಹು ನಿವೇಶನವಾಗಿ ವಿಂಗಡಿಸಲು ಕಾರಣೀಕರ್ತರಾದ 5ನೇ ಎದುರುದಾರರು ದಿ.30.4.2012ರಂದು ನಿವೃತ್ತಿ ಹೊಂದಿರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ.8(2)(ಡಿ) ಅಡಿಯಲ್ಲಿ ಹಾಗೂ ಕೆ.ಸಿ.ಎಸ್. ನಿಯಮನಾವಳಿಗಳ ಪ್ರಕಾರ ಕ್ರಮಕೈಗೊಳ್ಳಲು ಬರುವುದಿಲ್ಲ.

9. 1ರಿಂದ 3ನೇ ಎದುರುದಾರರು ದಸ್ತಾವೇಜುಗಳನ್ನು ನೋಂದಣಿ ಮಾಡಿದ್ದು, ಅವರ ಮುಂದೆ ಯಾವುದೇ ದಸ್ತಾವೇಜನ್ನು ನೋಂದಣಿ ಮಾಡಲು ಹಾಜರುಪಡಿಸಿದಾಗ ಅದನ್ನು

ನೋಂದಣಿಯಿಂದ ತಿರಸ್ಕರಿಸುವಂತಿಲ್ಲ. ದಾಖಲೆಯಲ್ಲಿರುವ ಪಕ್ಷಕಾರರು, ನಿಗಧಿತ ಸ್ಟಾಂಪ್ ಮತ್ತು ನೋಂದಣಿ ಶುಲ್ಕ ಪಾವತಿಸಿಕೊಂಡು ದಸ್ತಾವೇಜನ್ನು ನೋಂದಣಿ ಮಾಡಬೇಕಾಗಿರುವುದರಿಂದ ಅವರು ಯಾವುದೇ ಕರ್ತವ್ಯಲೋಪ ಮಾಡಿದ್ದಾರೆಂದು ಕಂಡುಬರುವುದಿಲ್ಲ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ನೆಲಮಂಗಲ ಪುರಸಭೆಯ ಖಾತೆ ನಂ.7557ರ ಏಕ ನಿವೇಶನ ಖಾತೆಯನ್ನು ಷರತ್ತು ಉಲ್ಲಂಘಿಸಿ ಖಾತೆ ಸಂ.7557/1ರಿಂದ 20 ನಿವೇಶನಗಳನ್ನು ವಿಂಗಡಿಸಿರುವುದರಿಂದ ಈ ಬಹು ಖಾತೆಗಳನ್ನು ರದ್ದುಗೊಳಿಸಿ ಮಾನ್ಯ ಜಿಲ್ಲಾಧಿಕಾರಗಳ ಭೂ ಪರಿವರ್ತನಾ ಆದೇಶದ ಪ್ರಕಾರ ಏಕಖಾತೆ ನಿವೇಶನ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 13/7/17.

**[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

13/7